**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಸಿ.ಸಿ. ಸಂಖ್ಯೆ: 460/2022**

**ಸಿ.ಡಬ್ಲೂ: 18/ಪಿ.ಡಬ್ಲೂ: 11**

**ಪ್ರಮಾಣೀಕರಿಸಿದ ದಿನಾಂಕ: 24-09-2025**

| | |
|---|---|
| **ಹೆಸರು** | ಆನಂದಬಾಬು |
| **ತಂದೆಯ ಹೆಸರು** | ಲೇಟ್ ವೆಂಕಟರಾಮಪ್ಪ |
| **ವಯಸ್ಸು** | 63 ವರ್ಷ |
| **ವೃತ್ತಿ** | ನಿವೃತ್ತ ಪಿ ಎಸ್ ಐ |
| **ವಾಸ** | **ಬೇತಮಂಗಲ** |

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ:-**

1. ನಾನು 13.08.2021 ರಿಂದ ಜನವರಿ 2022 ರವರೆಗೆ ಕ್ಯಾಸಂಬಹಳ್ಳಿ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ:02.10.2021 ರಂದು ಬೆಳಗ್ಗೆ 11.30 ಗಂಟೆಗೆ ನಾನು ನನ್ನ ಸಿಬ್ಬಂದಿಗಳಾದ ಚಾಸಾ 1, 12 ರಿಂದ 14 ರವರು ನಮ್ಮ ಠಾಣೆಯ ಮುಂದೆ ಇರುವ ಠಾರು ರಸ್ತೆಯಲ್ಲಿ ಐ ಎಂ ವಿ ಪ್ರಕರಣಗಳಿಗೆ ಸಂಬಂದ ಪಟ್ಟಂತೆ ವಾಹನಗಳನ್ನು ಪರಿಶೀಲನೆ ಮಾಡುತ್ತಿರುವಾಗ ಮ.11.30 ಗಂಟೆ ಸಮಯಕ್ಕೆ ಕ್ಯಾಸಂಬಹಳ್ಳಿ ಕಡೆ ಇಂದ ಬಸವನಗುಡಿ ಕ್ರಾಸ್ ಕಡೆಗೆ ಒಂದು ದ್ವಿಚಕ್ರ ವಾಹನವು ಬರುತ್ತಿದ್ದು ಅದರಲ್ಲಿ 3 ಮಂದಿ ವ್ಯಕ್ತಿಗಳು ತ್ರಿಬಲ್ ರೈಡ್ ಮಾಡಿಕೊಂಡು ಅತಿವೇಗ ಮತ್ತು ಅಜಾಗರೂಕತೆ ಇಂದ ಬರುತ್ತಿದ್ದರು. ಆಗ ಚಾಸಾ1 ರವರು ಸದರಿ ವಾಹನವನ್ನು ನಿಲ್ಲಿಸಲು ಸೂಚಿಸಿರುತ್ತಾರೆ. ಆಗ ಸದರಿ ಗಾಡಿಯ ಹಿಂಬಾಗದಲ್ಲಿ ಕುಳಿತಿದ್ದ ಇಬ್ಬರು ವ್ಯಕ್ತಿಗಳು ಗಾಡಿಯನ್ನು ಓಡಿಸುತ್ತಿದ್ದ ವ್ಯಕ್ತಿಗೆ ಗಾಡಿ ಕಡಾನಕ್ಕೋ ಉಸ್ಕಾ ಊಪರ್ ಚಡಾವೋ ಎಂದು ಉರ್ದು ಭಾಷೆಯಲ್ಲಿ ಪ್ರಚೋದನೆ ಮಾಡಿರುತ್ತಾರೆ. ಆಗ ಸದರಿ ವಾಹನವನ್ನು ಓಡಿಸುತ್ತಿದ್ದ ವ್ಯಕ್ತಿಯು ಚಾಸಾ1 ರವರ ಸೂಚನೆಯನ್ನು ಗಮನಿಸದೇ ಅತೀ ವೇಗವಾಗಿ ಸದರಿ ಗಾಡಿಯನ್ನು ಚಲಾಯಿಸಿಕೊಂಡು ಬಂದು ಆ ದಿನ ಕರ್ತವ್ಯ ನಿರ್ವಹಿಸುತ್ತಿದ್ದ ಚಾಸಾ1 ರವರಿಗೆ ಡಿಕ್ಕಿ ಹೊಡೆದಿದ್ದು ಅವರ ಬಲಗಾಲಿನ ಪಾದದ ಮಣಿಕಟ್ಟಿನ ಬಳಿ ಗಂಬೀರ ಗಾಯವಾಗಿರುತ್ತದೆ. ಚಾಸಾ1 ರವರು ಅದರ ರಭಸಕ್ಕೆ ಕೆಳಗಡೆ ಬಿದ್ದಿರುತ್ತಾರೆ. ಚಾಸಾ1 ರವರಿಗೆ ಫ್ರಾಕ್ಚರ್ ಆಗಿರುತ್ತದೆ ಮತ್ತು ಅವರಿಗೆ ಒಳ ಗಾಯವಾಗಿರುತ್ತದೆ. ಇದರಿಂದ ಚಾಸಾ1 ರವರಿಗೆ ಅಲ್ಲಿಂದ ಏಳಲು ಆಗಿರಲಿಲ್ಲ. ಆಗ ನನ್ನ ಇತರ ಸಿಬ್ಬಂದಿಗಳು ಮತ್ತು ನಾನು ಸದರಿ ಗಾಡಿಯನ್ನು ಓಡಿಸುತ್ತಿದ್ದ ವ್ಯಕ್ತಿಗಳನ್ನು ಮತ್ತು ಸದರಿ ಗಾಡಿಯನ್ನು ಹಿಡಿದು ನೋಡಿದಾಗ ಅದು ಟಿವಿಎಸ್ ಎಕ್ಸೆಲ್ 100 ಹೆವಿ ಡ್ಯೂಟಿ ಸಂಖ್ಯೆ ಕೆಎ 08 ಎಕ್ಸ್ 2663 ಎಂಬ ವಾಹನವಾಗಿತ್ತು.

3. ನಂತರ ನನ್ನ ಸಿಬ್ಬಂದಿಗಳು ಮತ್ತು ಮೇಲಾದಿಕಾರಿಯವರು ಸದರಿ ಗಾಡಿಯನ್ನು ಓಡಿಸುತ್ತಿದ್ದ ವ್ಯಕ್ತಿಗಳ ಹೆಸರು, ವಿಳಾಸ ಕೇಳಲಾಗಿ ಒಬ್ಬರ ಹೆಸರು ಸರ್ದಾರ್ ಬಿನ್ ನೂರುಲ್ಲಾ, ಇನ್ನೊಬ್ಬನ ಹೆಸರು ಅನ್ವರ್ ಪಾಷ ಅಲಿಯಾಸ್ ಅನ್ವರ್, ಬಿನ್ ಖಾಸಿಂ ಮತ್ತು 3 ನೇ ವ್ಯಕ್ತಿಯ ಹೆಸರು ಶಫಿ ಉಲ್ಲಾ ಅಲಿಯಾಸ್ ಶಫಿ ಬಿನ್ ಬಾಬು ಸಾಹೇಬ್ ಎಂದು ತಿಳಿದು ಬಂದಿದ್ದು ಅವರೆಲ್ಲರೂ ಎಲ್ಲಾಗರಂ

ಗ್ರಾಮದ ನಿವಾಸಿಗಳು ಆಂದ್ರ ಎಂದು ತಿಳಿದುಬಂದಿರುತ್ತದೆ. ನಂತರ ನಾನು ಸದರಿ 3 ಆರೋಪಿತರನ್ನು ಹಾಗೂ ಸದರಿ ದ್ವಿಚಕ್ರ ವಾಹನವನ್ನು ಚಾಸಾ12 ರಿಂದ 14 ರವರ ಜೊತೆ ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ. ಆಗ ಚಾಸಾ1 ರವರು ನೋವಿನಿಂದ ಇದ್ದ ಕಾರಣ ನಾನು ಅವರನ್ನು ಕರೆದುಕೊಂಡು ನಮ್ಮ ಪೋಲೀಸ್ ವಾಹನ ಸಂಖ್ಯೆ ಕೆಎ 08 ಜಿ 131 ವಾಹನದಲ್ಲಿ ಅದರ ಚಾಲಕನಾದ ಚಾಸಾ15 ರವರನ್ನು ಕರೆದುಕೊಂಡು ಕೆಜಿಎಫ್ ರಾಬರ್ಟ್ ಸನ್ ಪೇಟೆಯಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಂತರ ನಾನು ಚಾಸಾ1 ರವರಿಗೆ ವೈದ್ಯರು ಚಿಕಿತ್ಸೆ ನೀಡಿದ ನಂತರ ಅವರ ಹೇಳಿಕೆಯನ್ನು ಮ.1.40 ಗಂಟೆ ಇಂದ 2.45 ರವರೆಗೆ ಪಡೆದುಕೊಂಡಿರುತ್ತೇನೆ. ಆ ಸಮಯದಲ್ಲಿ ಚಾಸಾ1 ರವರು ತುಂಬಾ ನೋವಿನಿಂದ ನಿತ್ರಾಣದಲ್ಲಿದ್ದರು. ನಂತರ ಠಾಣೆಗೆ ಹಿಂತಿರುಗಿ ಈ ಪ್ರಕರಣಕ್ಕೆ ಸಂಬಂದ ಪಟ್ಟಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ಮೇಲದಿಕಾರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ19 ರವರಿಗೆ ಹಸ್ತಾಂತರಿಸಿರುತ್ತೇನೆ.

4. ಅದೇ ದಿನ ದಿನಾಂಕಃ02.10.2021 ರಂದು ಚಾಸಾ19 ರವರು ಕೃತ್ಯ ನಡೆದ ಸ್ಥಳಕ್ಕೆ ಪರಿಶೀಲನೆಗೆ ಬಂದಿದ್ದು ನಾನು ಆ ಸಮಯದಲ್ಲಿ ನಮ್ಮ ಆವರಣದಲ್ಲಿ ನಿಲ್ಲಿಸಿದ್ದ ಆರೋಪಿತರು ಉಪಯೋಗಿಸಿದ ಸದರಿ ದ್ವಿಚಕ್ರ ವಾಹನವನ್ನು ಮತ್ತು ಸದರಿ ಕೃತ್ಯ ನಡೆದ ಸ್ಥಳವನ್ನು ಸಹ ಅವರಿಗೆ ತೋರಿಸಿ ಅಲ್ಲಿ ನಡೆದ ಮಹಜರು ಕ್ರಮಕ್ಕೆ ಸಹಿಯನ್ನು ಮಾಡಿರುತ್ತೇನೆ ಸದರಿ ಮಹಜರು ಕ್ರಮವನ್ನು ಸಂಜೆ 4.30 ರಿಂದ 5.30 ಗಂಟೆಯವರೆಗೆ ಮಾಡಿರುತ್ತೇವೆ. ಸದರಿ ವಿಚಾರಕ್ಕೆ ಸಬಂದ ಪಟ್ಟಂತೆ ನಾನು ಚಾಸಾ19 ರವರಿಗೆ ನನ್ನ ಹೇಳಿಕೆಯನ್ನು ಸಹ ನೀಡಿರುತ್ತೇನೆ. ನಾನು ಆ ದಿನ 1 ರಿಂದ 3 ನೇ ಆರೋಪಿತರು ಮದ್ಯಪಾನ ಮಾಡಿ ಗಾಡಿ ಚಲಾಯಿಸಿದ್ದ ಎಂಬುವುದಕ್ಕೆ ಸಂಬಂದ ಪಟ್ಟಂತೆ ನಿವೇದನೆಯನ್ನು ವೈದ್ಯರಿಗೆ ಕೂಡ ನೀಡಿರುತ್ತೇನೆ. ಸಾಕ್ಷಿಗೆ ನಿಪಿ12 ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ಸಾಕ್ಷಿಯ ಸಹಿಯನ್ನು ಈಗ ನಿಪಿ12 ಡಿ ಎಂದು ಗುರುತಿಸಲಾಯಿತು.

3. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ದಾಖಲೆಯು ಚಾಸಾ1 ರವರ ಹೇಳಿಕೆ ಆಗಿದ್ದು ಅದನ್ನು ಈಗಾಗಲೇ ನಿಪಿ2 ಎಂದು ಗುರುತಿಸಲಾಗಿದ್ದು, ಸಾಕ್ಷಿಯನ್ನು ನಿಪಿ2 ಸಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ತಾನು ಆ ದಿನ ದಾಖಲಿಸಿದ ಪ್ರಥಮ ವರ್ತಮಾನ ವರದಿ ಎಂದು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ಈಗ ನಿಪಿ13 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನುನ ನಿಪಿ13 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಅಮಾನತು ಮತ್ತು ಸ್ಥಳ ಮಹಜರಾಗಿದ್ದು ಅದನ್ನು ಈಗಾಗಲೇ ನಿಪಿ.8 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.8 ಡಿ ಎಂದು ಗುರುತಿಸಲಾಯಿತು. ಆ ದಿನ ನಾವು ಅಮಾನತುಪಡಿಸಿಕೊಂಡ ದ್ವಿಚಕ್ರ ವಾಹನವನ್ನು ನೋಡಿದರೆ ಗುರುತಿಸುತ್ತೇನೆ ಕಡತದಲ್ಲಿರುವ ನಿಪಿ3

ಮತ್ತು 4 ಛಾಯ ಚಿತ್ರಗಳನ್ನು ತೋರಿಸಲಾಗಿ ಸಾಕ್ಷಿಯು ಅದೇ ದ್ವಿಚಕ್ರ ವಾಹನ ಎಂದು ಗುರುತಿಸುತ್ತಾರೆ. ಆ ದಿನ ಚಾಸಾ1 ರವರ ಮೇಲೆ ಗಾಡಿಯನ್ನು ಗುದ್ದಿಸಿ ಅವರಿಗೆ ನೋವುಂಟು ಮಾಡಿದ ಮತ್ತು ಅವರ ಸರ್ಕಾರಿ ಕೆಲಸಕ್ಕೆ ಅಡ್ಡಿ ಉಂಟು ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಒಬ್ಬರು ಆರೋಪಿತರು ಇರುತ್ತಾರೆ. ಈ ಸಮಯದಲ್ಲಿ ಇನ್ನೊಂದು ಆರೋಪಿಯು ಗೈರು ಹಾಜರಾಗಿದ್ದು ಅವರ ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ಹೇಳುತ್ತಾರೆ.

**<u>ಪಾಟೀ ಸವಾಲುಃ-ಆರೋಪಿತರ ಪರ ಶ್ರೀ ಹೆಚ್ ಸಿ ಎಸ್ ವಕೀಲರಿಂದಃ-</u>**

**4.** ಆ ದಿನ ನಾವು **6** ಮಂದಿ ಕರ್ತವ್ಯದಲ್ಲಿ ಇದ್ದೆವು. ಆ ದಿನ ನಾವು ನಮ್ಮ ಠಾಣೆಯ ಮುಂಬಾಗ ವಾಹನಗಳ ಪರಿಶೀಲನೆ ಮಾಡುತ್ತಿದ್ದೆವು. ಆ ದಿನ ನಾವು ಸಿಬ್ಬಂದಿಗಳು ಸ್ವಲ್ಪ ಮಂದಿ ಎಡಗಡೆ, ಸ್ವಲ್ಪ ಮಂದಿ ಬಲಗಡೆ ಇದ್ದೆವು. ಆ ದಿನ ಚಾಸಾ1 ಮತ್ತು **14** ರವರು ರಸ್ತೆಯ ಎಡಗಡೆ ಕರ್ತವ್ಯದಲ್ಲಿ ಇದ್ದರು. ನಾನು ಆ ದಿನ ರಸ್ತೆಯಲ್ಲಿ ಕರ್ತವ್ಯ ಮಾಡುತ್ತಾ ನಿಂತಿದ್ದೆನು. ಆ ದಿನ ನಮ್ಮ ತಪಾಸಣೆಯ ಸಂದರ್ಬದಲ್ಲಿ ಸಾರ್ವಜನಿಕರು ಯಾರು ಸೇರಿರಲಿಲ್ಲ. ಆ ದಿನ ಆರೋಪಿತರು ಸುಮಾರು **40** ರಿಂದ **50** ವೇಗದಲ್ಲಿ ಬರುತ್ತಿದ್ದರು.

**5.** ಸಾಕ್ಷಿಗೆ ಕಡತದಲ್ಲಿರುವ ಸ್ಥಳದ ನಕ್ಷೆಯನ್ನು ತೋರಿಸಲಾಗಿ ಸದರಿ ಕ್ಯಾಸಂಬಹಳ್ಳಿ ಠಾಣೆಯ ಮುಂಬಾಗ ರಸ್ತೆ ಇದ್ದು ಅದರ ಮುಂದೆ ಒಂದು ಪಾಸ್ಟ್ ಪುಡ್ ಸೆಂಟರ್ ಇದೆ ಎಂದು ನಮೂದು ಮಾಡಿರುತ್ತೀರಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ದಿನ ಸದರಿ ಫಾಸ್ಟ್ ಪುಡ್ ಸೆಂಟರ್ ಬಂದಾಗಿತ್ತು ಎನ್ನುತ್ತಾರೆ. ಸದರಿ ನಕಾಶೆಯಂತೆ **3** ಪೋಲೀಸ್ ಬಾರಿಕೇಡ್ ಗಳು ಇರುವ ಬಗ್ಗೆ ನಮೂದಿದೆ ಎಂದರೆ ಸರಿ. ಸಾಮಾನ್ಯವಾಗಿ ರಸ್ತೆಯಲ್ಲಿ ಬಾರಿಕೇಡುಗಳನ್ನು ಇಟ್ಟರೆ ವಾಹನಗಳು ನಿದಾನವಾಗಿ ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿತರು ಮಾತ್ರ ಆ ದಿನ ಜೋರಾಗಿ ಗಾಡಿಯಲ್ಲಿ ಬಂದಿರುತ್ತಾರೆ ಎನ್ನುತ್ತಾರೆ. ಆ ದಿನ ನನ್ನ ಪ್ರಕಾರ ಚಾಸಾ1 ರವರು ಕೆಳಗಡೆ ಕೂತು ಹಾಗೆ ಬಿದ್ದಿರುತ್ತಾರೆ. ಆ ಸಮಯದಲ್ಲಿ ನಾನು ಅಲ್ಲಿ ಇದ್ದು ಅದನ್ನು ನೋಡಿರುತ್ತೇನೆ. ಸದರಿ ಘಟನೆಯು ಬೆಳಗ್ಗೆ **11.30** ಕ್ಕೆ ನಡೆದಿರುತ್ತದೆ.

**6.** ಕ್ಯಾಸಂಬಹಳ್ಳಿ ಯಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೆಚ್ಚಿನ ಸಮಯದಲ್ಲಿ ಅಲ್ಲಿ ವೈದ್ಯರು ಇರುವುದಿಲ್ಲ ಎನ್ನುತ್ತಾರೆ. ಆ ದಿನ ನಾವು ಚಾಸಾ1 ರವರನ್ನು ಕ್ಯಾಸಂಬಳ್ಳಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವಾ ಎಂದರೆ ಹೋಗಿರುತ್ತೇವೆ. ಆ ದಿನ ಚಾಸಾ1 ರವರಿಗೆ ಕ್ಯಾಸಂಬಹಳ್ಳಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಏನಾದರೂ ನೀಡಿದ್ದಾರಾ ಎಂದರೆ ಸಾಕ್ಷಿಯು ಇಲ್ಲ ಅಲ್ಲಿ ವೈದ್ಯರೆ ಇರಲಿಲ್ಲ ಎನ್ನುತ್ತಾರೆ. ಸದರಿ ಕ್ಯಾಸಂಬಹಳ್ಳಿ ಇಂದ ಕೆಜಿಎಫ್ ಗೆ ಸುಮಾರು **5-6** ಕಿ ಮೀ ಅಂತರ ಇರುತ್ತದೆ. ಆ ದಿನ ನಾವು ಸರ್ಕಾರಿ ಜೀಪಿನಲ್ಲಿ ಕೆಜಿಎಫ್ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಾವು ಸುಮಾರು ಮ.**12.00** ಗಂಟೆಗೆ ಕೆಜಿಎಫ್ ಸರ್ಕಾರಿ ಆಸ್ಪತ್ರೆಗೆ ತಲುಪಿರುತ್ತೇವೆ. ಸುಮಾರು **1** ರಿಂದ **1.30** ಗಂಟೆಗಳ ಕಾಲ ಚಾಸಾ1 ರವರಿಗೆ ಚಿಕಿತ್ಸೆಯನ್ನು ವೈದ್ಯರು ನೀಡಿರುತ್ತಾರೆ. ನಂತರ ನಾನು ಚಾಸಾ1 ರವರ ಹೇಳಿಕೆಯನ್ನು ಪಡೆದುಕೊಂಡು ಠಾಣೆಗೆ ಮ **3.15** ಗಂಟೆಗೆ ಹಿಂತಿರುಗಿರುತ್ತೇನೆ.

7. ಆ ದಿನ ಮಹಜರನ್ನು ಸಂಜೆ ನಮ್ಮ ಮೇಲಾದಿಕಾರಿ ಬಂದಾಗ ಮಾಡಲಾಗಿದ್ದು ನಾನು ಅಲ್ಲಿ ಹಾಜರಿದ್ದೆನು. ಸಾಕ್ಷಿಯು ಮುಂದುವರೆದು ಆ ಸಮಯದಲ್ಲಿ ನಾನು ನನ್ನ ಮೇಲದಿಕಾರಿಗೆ ವಾಹನವನ್ನು ತೋರಿಸಿದ್ದು ಆ ಸಮಯದಲ್ಲಿ ಛಾಯಚಿತ್ರ ಕೂಡ ತೆಗೆದಿರುತ್ತೇವೆ ಎನ್ನುತ್ತಾರೆ ಸಾಮಾನ್ಯವಾಗಿ ಕ್ಯಾಸಂಬಹಳ್ಳಿ ಠಾಣೆಯ ಮುಂಬಾಗದಲ್ಲಿರುವ ರಸ್ತೆಯಲ್ಲಿ ತುಂಬಾ ವಾಹನಗಳು ಹೋಗುತ್ತಿರುತ್ತವೆ ಎಂದರೆ ಸಾಕ್ಷಿಯು ಅಷ್ಟೊಂದು ಇಲ್ಲ ವಾಹನಗಳು ಹೋಗುತ್ತವೆ ಎನ್ನುತ್ತಾರೆ. ಮಹಜರು ಕಾಲದಲ್ಲಿ 2 ಪಂಚರು ಹಾಜರಿರುತ್ತಾರೆ. ಸದರಿ ಕ್ಯಾಸಂಬಹಳ್ಳಿ ಠಾಣೆಯ ಮುಂಬಾಗ ಇರುವ ರಸ್ತೆಯು ಇಳಿಜಾರಿನಲ್ಲಿ ಇದ್ದು ವಾಹನಗಳು ನಿದಾನವಾಗಿ ಹೋಗುತ್ತದೆ ಎಂದರೆ ಸಾಕ್ಷಿಯು ಇಳಿಜಾರಿದ್ದು ವಾಹನಗಳು ನಿದಾನವಾಗಿ ಹೋಗುವುದಿಲ್ಲ ಎನ್ನುತ್ತಾರೆ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲದಿದ್ದರೂ ಸಹ ಚಾಸಾ1 ರವರು ನನ್ನ ಸಹೋದ್ಯೋಗಿ ಆದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**